ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 23–8–2017

# ಪತ್ರಿಕಾ ಪ್ರಕಟಣೆ

91/91

## ಸಂಚಾರಿ ತಾರಾಲಯ ಯೋಜನೆ ರಾಜ್ಯಾದ್ಯಂತ ಪ್ರಾರಂಭ– ಸಚಿವ ಎಂ.ಆರ್. ಸೀತಾರಾಂ

ಬೆಂಗಳೂರು ಆಗಸ್ಟ್ 23(ಕರ್ನಾಟಕ ವಾರ್ತೆ)

ಜವಾಹರ್‌ಲಾಲ ನೆಹರೂ ತಾರಾಲಯ ಆನೇಕ ವರ್ಷಗಳಿಂದ ಜನಸಾಮಾನ್ಯರು ಹಾಗೂ ವಿದ್ಯಾರ್ಥಿಗಳಲ್ಲಿ ಖಗೋಳ ವಿಜ್ಞಾನ ಮತ್ತು ಇತರೆ ವೈಜ್ಞಾನಿಕ ವಿಚಾರಗಳ ಕುರಿತು ಅರಿವು ಮೂಡಿಸುವುದರಲ್ಲಿ ಯಶಸ್ವಿಯಾಗಿದೆ ಎಂದು ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎಂ.ಆರ್. ಸೀತಾರಾಂ ತಿಳಿಸಿದರು.

ಇಂದು ವಿಧಾನ ಸೌಧದ ಬ್ಯಾಂಕ್ವೆಟ್‌ಹಾಲ್‌ನಲ್ಲಿ ಸಂಚಾರಿ ಡಿಜಿಟಲ್ ತಾರಾಲಯ ಉದ್ಘಾಟಿಸಿ ಮಾತನಾಡಿದ ಅವರು ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳು ಬೆಂಗಳೂರಿನಲ್ಲಿರುವ ನೆಹರೂ ತಾರಾಲಯಕ್ಕೆ ಬರುವುದು ಕಷ್ಟಕರವಾದುದರಿಂದ, ವಿದ್ಯಾರ್ಥಿಗಳಿಗೆ ಪ್ರಚಲಿತ ಖಗೋಳ ವಿಜ್ಞಾನದ ಬಗ್ಗೆ ನೋಡಿ ತಿಳಿದುಕೊಳ್ಳುವ ಅವಕಾಶ ಕಡಿಮೆ, ಸಂಚಾರಿ ಡಿಜಿಟಲ್ ತಾರಾಲಯಗಳು ಗ್ರಾಮೀಣ ವಿದ್ಯಾರ್ಥಿಗಳ ಜ್ಞಾನ ವೃದ್ಧಿಸುವಲ್ಲಿ ಸಹಾಯಕವಾಗಲಿವೆ ಎಂದರು.

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಮತ್ತು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಸಹಭಾಗಿತ್ವದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳ ಶಾಲೆಗೆ ಹೋಗಿ ಖಗೋಳ ವಿಜ್ಞಾನದ ಪ್ರದರ್ಶನಗಳನ್ನು ನೀಡುವ ಸಂಚಾರಿ ತಾರಾಲಯ ಯೋಜನೆಯನ್ನು ರಾಜ್ಯಾದ್ಯಂತ ಪ್ರಾರಂಭಿಸಲಾಗಿದೆ ಎಂದು ಹೇಳಿದರು.

ಮೊದಲಿಗೆ ಸಂಚಾರಿ ತಾರಾಲಯಗಳ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳ ಸರ್ಕಾರಿ ಪ್ರೌಢಶಾಲೆಗಳಿಗೆ ತೆರಳಿ ಅತ್ಯಾಧುನಿಕ ಪ್ರೊಜೆಕ್ಟರ್‌ನ ಸಹಾಯದಿಂದ ವಿಶೇಷ ಗೋಳಾಕಾರದ ಗೊಮ್ಮಟದಲ್ಲಿ ಅದ್ಭುತ ಕಾಲ್ಪನಿಕ ಆಕಾಶವನ್ನು ಸೃಷ್ಟಿಸಿ ವಿದ್ಯಾರ್ಥಿಗಳಿಗೆ ಮನೋರಂಜನೆಯ

ಮೂಲಕ ಖಗೋಳ ವಿಜ್ಞಾನ ಮತ್ತು ಇತರೆ ವೈಜ್ಞಾನಿಕ ವಿಷಯಗಳನ್ನು ತಿಳಿಸುತ್ತವೆ. ನಂತರ ಈ ಯೋಜನೆಯನ್ನು ಹಂತ-ಹಂತದಲ್ಲಿ ಎಲ್ಲಾ ಗ್ರಾಮೀಣ ಶಾಲೆಗಳಿಗೂ ವಿಸ್ತರಿಸಲಾಗುವುದು ಎಂದರು.

**92/92**

## ಬಂಡವಾಳ ಹೂಡಿಕೆ- ಕರ್ನಾಟಕ ರಾಜ್ಯ ಪ್ರಥಮ : ಸಚಿವ ಆರ್.ವಿ.ದೇಶಪಾಂಡೆ

ಬೆಂಗಳೂರು ಆಗಸ್ಟ್ 23(ಕರ್ನಾಟಕ ವಾರ್ತೆ)

ಬಂಡವಾಳ ಹೂಡಿಕೆಯ ಉದ್ದೇಶಿತ ಸ್ಥಾನದಲ್ಲಿ ಕರ್ನಾಟಕವು ಮೊದಲನೇ ಸ್ಥಾನದಲ್ಲಿದ್ದು 2017 ಜೂನ್ ವರೆಗೆ 1,40,683 ಕೋಟಿ ಬಂಡವಾಳವನ್ನು ನಮ್ಮ ರಾಜ್ಯದಲ್ಲಿ ಹೂಡಲಾಗಿದೆ ಎಂದು ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವ ಆರ್.ವಿ. ದೇಶಪಾಂಡೆ ತಿಳಿಸಿದರು.

ಅವರು ಇಂದು ವಿಧಾನಸೌಧದಲ್ಲಿ ಹಮ್ಮಿಕೊಳ್ಳಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಕರ್ನಾಟಕ ರಾಜ್ಯ ಕೈಗಾರಿಕಾ ನೀತಿ 2014-19 ರ ನ್ವಯ ಈ ಅವಧಿಯಲ್ಲಿ 5 ಲಕ್ಷ ಕೋಟಿ ಬಂಡವಾಳ ಆಕರ್ಷಿಸುವುದರೊಂದಿಗೆ 15 ಲಕ್ಷ ಜನರಿಗೆ ಉದ್ಯೋಗ ನೀಡುವ ಗುರಿ ಹೊಂದಲಾಗಿದೆ.

ಕಳೆದ ನಾಲ್ಕು ವರ್ಷಗಳಲ್ಲಿ 1823 ಕೈಗಾರಿಕಾ ಯೋಜನೆಗಳಿಗೆ ಏಕಗವಾಕ್ಷಿ ಸಮಿತಿಗಳಲ್ಲಿ ಅನುಮೋದನೆ ದೊರಕಿದೆ, ರಾಜ್ಯಕ್ಕೆ 3.34 ಲಕ್ಷ ಕೋಟಿ ಬಂಡವಾಳ ಹೂಡಿಕೆ ಆಗಲಿದ್ದು, 8.98 ಲಕ್ಷ ಜನರಿಗೆ ಉದ್ಯೋಗ ದೊರಕಲಿದೆ. ಬೃಹತ್ ಕೈಗಾರಿಕೆಗಳಲ್ಲಿ 1.89 ಲಕ್ಷ ಜನರಿಗೆ ಮತ್ತು ಎಂ.ಎಸ್.ಎಂ.ಇ ಕೈಗಾರಿಕೆಗಳಲ್ಲಿನ 12.30 ಲಕ್ಷ ಜನರಿಗೆ, ಒಟ್ಟು 14.19 ಲಕ್ಷ ಜನರಿಗೆ ಕಳೆದ ನಾಲ್ಕು ವರ್ಷಗಳಲ್ಲಿ ಉದ್ಯೋಗ ದೊರೆತಿದೆ ಎಂದರು.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ ಸಮೀಕ್ಷೆ ಪ್ರಕಾರ ದೇಶದಲ್ಲಿ ಪ್ರತಿ ವರ್ಷ ಶೇ. 60 ಕ್ಕಿಂತ ಹೆಚ್ಚಿನ ಇಂಜಿನಿಯರಿಂಗ್ ಪದವೀಧರರು ನಿರುದ್ಯೋಗಿಗಳಾಗುತ್ತಿದ್ದಾರೆ. ಇದನ್ನು ಅರಿತ ಸರ್ಕಾರ ಹೆಚ್ಚಿನ ಉದ್ಯೋಗ ನೀಡುವ ಕೈಗಾರಿಕೆಗಳ ಸ್ಥಾಪನೆಗೆ ಉತ್ತೇಜನ ನೀಡುವುದರ ಜೊತೆಗೆ ಹೆಚ್ಚಿನ ಬೇಡಿಕೆಯ ಕೈಗಾರಿಕೆಗಳಾದ ಗೊಂಬೆ, ಮೊಬೈಲ್ ತಯಾರಿಕೆ ಮುಂತಾದವುಗಳ ಹೆಚ್ಚಳಕ್ಕೆ ನೀತಿ ರೂಪಿಸಲಾಗುತ್ತಿದೆ. ರಾಜ್ಯದಲ್ಲಿ ಬಂಡವಾಳ ಹೂಡಿಕೆಗೆ ಬೇಡಿಕೆ ಬಂದಿದೆ. ಒರಾಕಲ್ ಕಂಪೆನಿ 2438 ಕೋಟಿ ಬಂಡವಾಳ ಹೂಡಿಕೆ ನಡೆಸಿ 9627 ಜನರಿಗೆ ಉದ್ಯೋಗ ಕಲ್ಪಿಸಲಿದೆ. ಹಾಗೆಯೇ ಟಿ.ವಿ.ಎಸ್. ಕಂಪೆನಿ 1110 ಕೋಟಿ,

ಮಂಗಳೂರು ರಿಫೈನರೀರಸ್ 996 ಕೋಟಿ, ಹೀಗೆ ಹಲವು ಕಂಪೆನಿಗಳು ಹೂಡಿಕೆ ಜೊತೆಗೆ ಉದ್ಯೋಗಾವಕಾಶ ಸಹ ಕಲ್ಪಿಸಲಿವೆ ಎಂದರು.

ರಾಜ್ಯದ ಕೈಗಾರಿಕಾ ಬಂಡವಾಳ ಹೂಡಿಕೆ ಹೆಚ್ಚಿಸಲು ಇನ್‌ವೆಸ್ಟ್ ಕರ್ನಾಟಕ ಫೋರಂನಲ್ಲಿ 5 ಪ್ರಮುಖ ಕೈಗಾರಿಕೋದ್ಯಮಿ, 2 ಉತ್ತನ್ನ ಮಟ್ಟದ ಸರ್ಕಾರಿ ಅಧಿಕಾರಿಗಳನ್ನು ನೇಮಿಸಲಾಗಿದ್ದು, ಇದರ ಕಾರ್ಯ ನಿರ್ವಾಹಕ ಅಧಿಕಾರಿಯಾಗಿ ದೀಪಕ್ ಸೂದ್ ಅವರನ್ನು ನಿಯೋಜಿಸಲಾಗಿದೆ. ಎಂದರು.

ಭಾರತ ಸರ್ಕಾರದ ಚೆನ್ನೈ–ಬೆಂಗಳೂರು–ಚಿತ್ರದುರ್ಗ ಕಾರಿಡಾರ್ ಯೋಜನೆಯಡಿ ತುಮಕೂರು ಜಿಲ್ಲೆಯ ವಸಂತನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ತುಮಕೂರು ಕೈಗಾರಿಕಾ 9,629 ಎಕರೆ ಪ್ರದೇಶದಲ್ಲಿ ಸ್ಥಾಪಿಸಲಾಗುತ್ತಿದ್ದು, ಇದಕ್ಕೆ ರೂ. 400 ಕೋಟಿ ಮಂಜೂರಾತಿ ನೀಡಲಾಗಿದ್ದು, 150 ಕೋಟಿಯನ್ನು ಕೆ.ಐ.ಎ.ಡಿ.ಬಿ. ಗೆ ಬಿಡಗಡೆ ಮಾಡಲಾಗಿದೆ.

ತುಮಕೂರಿನ ವಸಂತಪುರನರಸಾಪುರ ಕೈಗಾರಿಕಾ ಪ್ರದೇಶದಲ್ಲಿ 540 ಎಕರೆಯಲ್ಲಿ ಮಿಷನ್‌ಟೂಲ್ಸ್ ಪಾರ್ಕ್‌ನ್ನು 425 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದ್ದು ರಾಜ್ಯ ಸರ್ಕಾರ 125 ಕೋಟಿ ನೀಡಿದ್ದು ಉಳಿದ ಹಣವನ್ನು ಕೆ.ಐ.ಎ.ಡಿ.ಬಿ. ಸಂಸ್ಥೆ ಭರಿಸುತ್ತಿದೆ. ವಸಂತನರಸಾಪುರ ಕೈಗಾರಿಕಾ ಪ್ರದೇಶದ 500 ಎಕರೆ ಪ್ರದೇಶದಲ್ಲಿ ಜಪಾನೀಸ್ ಕೈಗಾರಿಕಾ ಟೌನ್‌ಶಿಪ್ ಸ್ಥಾಪಿಸಲಾಗುತ್ತಿದೆ. ಬೆಂಗಳೂರನ್ನು ಪರಿಸರ ಸ್ನೇಹಿ ಮಾಡಲು "ನೂತನ ವಿದ್ಯುತ್ ವಾಹನ ಇಂಧನ ಸಂಗ್ರಹಾಲಯ' ನೀತಿಯನ್ನು ರೂಪಿಸುತ್ತಿರುವ ಮೊದಲ ರಾಜ್ಯ ನಮ್ಮದು ಎಂದರು.

ಸರ್ಕಾರವು ನವೆಂಬರ್ 23 ಹಾಗೂ 24 ರಂದು ರಾಷ್ಟ್ರೀಯ ಮಾರಾಟಗಾರರ ಮತ್ತು ಬಂಡವಾಳ ಹೂಡಿಕೆದಾರರ ಸಮಾವೇಶ ಹಮ್ಮಿಕೊಳ್ಳುತ್ತಿದ್ದು, ಹೆಚ್ಚು ಬಂಡವಾಳ ಹೂಡಿಕೆಯಾಗುವ ನಿರೀಕ್ಷೆ ಇದೆ. ರಾಜ್ಯ ಸರ್ಕಾರವು ಕೆ.ಐ.ಎ.ಡಿ.ಬಿ.ಡಿ. ಮತ್ತು ಕೆ.ಎಸ್.ಎಸ್.ಐ.ಡಿ.ಸಿ. ಸಂಸ್ಥೆಗಳ ಕೈಗಾರಿಕಾ ಪ್ರದೇಶ ಮತ್ತು ಎಸ್ಟೇಟ್‌ಗಳಲ್ಲಿ 120 ಅನ್ನು 346 ಕೋಟಿಗಳಲ್ಲಿ ಸೌಕರ್ಯ ಕಲ್ಪಿಸಲಾಗಿದೆ.

ಭಾರತ ಸರ್ಕಾರದ ಸಹಯೋಗದ ಶೇ. 50 ರಷ್ಟು ಹಂಚಿಕೆ ಆಧಾರದ ಮೇಲೆ 87 ಕೋಟಿ ಯೋಜನಾ ವೆಚ್ಚದಲ್ಲಿ ಅಡ್ವಾನ್ಸ್‌ಡ್ ಪಾಲಿಮರ್ ಡಿಸೈನ್ ಮತ್ತು ಅಭಿವೃದ್ಧಿ ಸಂಶೋಧನಾ ಪ್ರಯೋಗಾಲಯವನ್ನು ದೇವನಹಳ್ಳಿಯ 5 ಎಕರೆ ಭೂಮಿಯಲ್ಲಿ ಸ್ಥಾಪಿಸಲಾಗುತ್ತಿದ್ದು ಇದಕ್ಕೆ 20 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. 90.50 ಕೋಟಿ ವೆಚ್ಚದಲ್ಲಿ ಬೆಂಗಳೂರಿನ ಏರೋಸ್ಪೇಸ್ ಪಾರ್ಕ್, ಕುಮಟಾದಲ್ಲಿ 10 ಕೋಟಿ ರೂ. ವೆಚ್ಚದಲ್ಲಿ

ಗೋಡಂಬಿ ತಂತ್ರಜ್ಞಾನ ಕೇಂದ್ರ, ಟಿಯ್ಸ್ ಯೋಜನೆಯಡಿ 10 ಕೋಟಿ ಯೋಜನಾ ವೆಚ್ಚದಲ್ಲಿ ಸಾಗರೋತ್ಪನ್ನ ರಫ್ತು ಸೌಲಭ್ಯ ಕೇಂದ್ರ ಸ್ಥಾಪಿಸಲಾಗಿದೆ.

ರಾಜ್ಯ ಸರ್ಕಾರವು ಮಹಿಳೆಯರಿಗೆ ಪ್ರತ್ಯೇಕವಾಗಿ ಹಾರೋಹಳ್ಳಿ –100 ಎಕರೆ ಸೇರಿದಂತೆ 6 ಮಹಿಳಾ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಭಾರತ ಸರ್ಕಾರದ ಪಾಲುದಾರಿಕೆಯೊಂದಿಗೆ ಬೆಂಗಳೂರಿನ ಸಿಎಂಟಿಐನಲ್ಲಿ 10 ಕೋಟಿ ವೆಚ್ಚದಲ್ಲಿ ಪ್ರೇಸೇಷನ್ ಮೆಟ್ರೋಲಾಜಿ ಲ್ಯಾಬ್ ಸ್ಥಾಪಿಸಲಾಗುತ್ತಿದೆ ಅಲ್ಲದೆ ಉತ್ಪಾದನಾ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಕೈಗಾರಿಕೆಗಳಿಗೆ ಪ್ರಶಸ್ತಿ ನೀಡಲಾಗುತ್ತಿದ್ದು, ಕರ್ನಾಟಕವು ಭಾರತದ ಅತ್ಯುತ್ತಮ ಉತ್ಪಾದನಾ ರಾಜ್ಯವೆಂದು ಗುರುತಿಸಲ್ಪಟ್ಟು. ಅಸೋಚಾಮ್ ಸಂಸ್ಥೆ ನೀಡುವ ಪ್ರಶಸ್ತಿಯನ್ನು ಪಡೆದುಕೊಂಡಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಇಲಾಖೆಯ ಉನ್ನತಾಧಿಕಾರಿಗಳು ಉಪಸ್ಥಿತರಿದ್ದರು.

**93/93**

## ಅಂತಿಮ ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು ಆಗಸ್ಟ್ 23(ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗದ ಅಧಿಸೂಚನೆ ದಿ: 03–03–2017 ರಲ್ಲಿ ಅಧಿಸೂಚಿಸಿರುವ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಅಂಧ ಮಕ್ಕಳ ಶಾಲೆಯಲ್ಲಿನ ಪದವೀಧರ ಸಹಾಯಕರು/ಶಿಕ್ಷಕರು –10 (06 +04 ಹೈ.ಕ) ಹುದ್ದೆಗಳ ಅಂತಿಮ ಆಯ್ಕೆಪಟ್ಟಿಯನ್ನು ದಿ: 21–8–2017 ರಂದು ಆಯೋಗದ ವೆಬ್‌ಸೈಟ್ www.kpsc.kar.nic.in ನಲ್ಲಿ ಅಭ್ಯರ್ಥಿಗಳ ಮಾಹಿತಿಗೆ ಪ್ರಕಟಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.